

ಬೇಕು. ಗೂಗಲ್ ಪೇ, ಫೋನ್ ಪೇ ನಾನು ಮಾಡ್ತೀನಿ, ಯಾರಾದರೂ ಹಣ ಕೊಡಿ ಎಂದು ಕೇಳ್ತಿದೀನಿ ಮೇಡಂ. ಯಾರ ಬಳಿಯೂ ಅಷ್ಟೊಂದು ಕ್ಯಾಶ್ ಇಲ್ಲ, ಇನ್ನೊಂದು ಅರ್ಧ ಗಂಟೆ ಮಾತ್ರ ಟೈಮಿದೆ' ಎಂದು ಅಳುಮುಖ ಮಾಡಿಕೊಂಡು ಹೇಳಿದವನನ್ನು ನೋಡಿ ಅಯ್ಯೋ ಎನಿಸಿತು.

'ಏನು ಓದ್ತಿದೀ ತಮ್ಮಾ' ಎಂದು ಕೇಳಿದಳು.

'ಬಿಎಸ್‌ಸಿ ಬಿಎಡ್ ಆಗಿದೆ ಮೇಡಂ. ನಮ್ದು ಕೊಪ್ಪಳದ ಹತ್ತಿರ ಒಂದು ಹಳ್ಳಿ. ಇಲ್ಲಿ ಕೋಚಿಂಗ್‌ಗಾಗಿ ಬಂದಿದೀನಿ' ಎಂದಾಗ, ಬಗಲಿಗೆ ಹಾಕಿಕೊಂಡಿದ್ದ ಸ್ಲಿಂಗ್‌ಬ್ಯಾಗ್‌ನಲ್ಲಿ ಹಣ ಒಂದು ಸಾವಿರ ಮಾತ್ರ ಇಟ್ಟುಕೊಂಡು ಬಂದಿದ್ದು ನೆನಪಾಯಿತು.

'ಇಲ್ಲೆಲ್ಲಾದರೂ ಎಟಿಎಂ ಇದೆಯಾ' ಎನ್ನುತ್ತಿದ್ದಂತೆ, ಅಂಚೆಕಚೇರಿಯದೇ ಎಟಿಎಂ ಕಡೆ ಕೈಮಾಡಿ ತೋರಿಸಿದ.

'ಬಾ, ನಾ ಹಣ ತೆಗೆಸಿ ಕೊಡ್ತೀನಿ, ನೀನು ಫೋನ್ ಪೇ ಮಾಡುವೆಯಂತೆ' ಎಂದು ಕರೆದುಕೊಂಡು ಹೋಗಿ ಬ್ಯಾಗಿಗೆ ಕೈಹಾಕಿ ತಡಕಾಡುತ್ತಿದ್ದಂತೆ ಫ್ಲ್ಯಾಶ್ ಆಯ್ತು. ಸದಾ ಆಧಾರ್ ಕಾರ್ಡು, ಎಟಿಎಂ ಕಾರ್ಡು, ಲೈಸೆನ್ಸ್ ಕಾರ್ಡ್ ಅನ್ನು ಒಂದು ಪುಟ್ಟ ಕವರಿಗೆ ಹಾಕಿ ಜೊತೆಯಲ್ಲೇ ಇಟ್ಟುಕೊಂಡಿರುತ್ತಿದ್ದವಳು, ಯಾವುದೋ ಕಾರಣಕ್ಕೆ ಅದನ್ನು ಹೊರತೆಗೆದು ಮರೆತು ಬಂದಿದ್ದಳು.

ಅಸಹಾಯಕತೆಯಿಂದ ಆ ಹುಡುಗನ ಕಡೆ ನೋಡಿ 'ಕಾರ್ಡ್ ಮರೆತು ಬಂದಿದ್ದೇನೆ, ಸಾರಿ ಎಂದಳು'. ಅವನ ಕಣ್ಣಲ್ಲಿ ಹೊಮ್ಮುತ್ತಿದ್ದ ಕೊನೆಯ ಭರವಸೆಯ ಕಿರಣವೂ ನಂದಿಹೋಗುತ್ತಿರುವಂತೆ ಕಾಣಿಸಿತು. 'ಇರಲಿ ಬಿಡಿ ಮೇಡಂ, ಮತ್ಯಾರನ್ನಾದರೂ ವಿಚಾರಿಸುತ್ತೇನೆ' ಎಂದು ಹೊರಗಡೆ ಓಡಿ ಹೋದವನನ್ನು ನೋಡುತ್ತಾ ನಿಟ್ಟುಸಿರುಬಿಟ್ಟಳು.

ಸ್ಕೂಟಿ ಸ್ಟಾರ್ಟ್ ಮಾಡುತ್ತ, ಯಾಕೋ ಮತ್ತೆ ಆ ಹುಡುಗ ಹೋದ ಕಡೆಗೆ ಕಣ್ಣು ಹಾಯಿಸಿದಳು. ಅವನು ಮತ್ಯಾರೋ ಬೈಕ್ ಹತ್ತಿ ಹೋಗುವವರನ್ನು ವಿಚಾರಿಸುತ್ತಿದ್ದುದು, ಅವರು ತಲೆಕೊಡವುತ್ತಿದ್ದುದು ಕಾಣಿಸಿತು.

ಮನಸ್ಸು ತಡೆಯಲಾರದೆ, ಮತ್ತೆ ಸ್ಕೂಟಿ ನಿಲ್ಲಿಸಿ, ಅವನೆಡೆಗೆ ಹೋಗಿ, 'ಏಯ್ ತಮ್ಮಾ, ಬಾ ಇಲ್ಲಿ' ಎಂದು ಕರೆದಳು. 'ಏನು ಮೇಡಂ' ಎನ್ನುತ್ತಾ ಸಪ್ಪೆಮುಖದಿಂದಲೇ ಬಂದ. ನಮ್ಮ ಮನೆಗೆ ಇಲ್ಲಿಂದ ಒಂದು ಹತ್ತು ನಿಮಿಷ ಆಗುತ್ತೆ, ಹೋಗಿ ನಿನಗೆ ಕ್ಯಾಶ್ ತಂದು ಕೊಡ್ತೀನಿ' ಎಂದು ಅವನಿಗೆ ತನ್ನ ಮೊಬೈಲ್ ನಂಬರ್ ಕೊಟ್ಟು, 'ಅಕಸ್ಮಾತ್ ಅಷ್ಟರಲ್ಲಿ ಬೇರೆಯವರ ಬಳಿ ಅರೇಂಜ್ ಆದರೆ ಕಾಲ್ ಮಾಡು, ನಾನು ಬರುವುದು ತಪ್ಪುತ್ತದೆ' ಎಂದು ಹೇಳಿ ಸ್ಕೂಟಿಯಲ್ಲಿ ಹೊರಟಳು.

ಮನೆಗೆ ಬಂದವಳೇ ಅಲಮಾರಿನಲ್ಲಿದ್ದ ಐನೂರರ ನೋಟುಗಳನ್ನು ಎಣಿಸಲು ಸಹ ಹೋಗದೆ, ಬ್ಯಾಗಿಗೆ ತುರುಕಿಕೊಂಡು, ಹದಿನೈದೇ ನಿಮಿಷದಲ್ಲಿ ವಾಪಾಸಾಗಿದ್ದಳು. ಅಷ್ಟರಲ್ಲಾಗಲೇ ಆ ಹುಡುಗ ಇವಳ ಬರುವಿಕೆಯ ಬಗ್ಗೆ ನಂಬಿಕೆ ಇರದೆ, ಎರಡು ಸಲ ಕಾಲ್ ಮಾಡಿದ್ದಾಗಿತ್ತು. ಟ್ರಾಫಿಕ್ ಬೇರೆ ಹೆಚ್ಚಿದ್ದುದರಿಂದ, ಜೊತೆಗೆ ಸ್ಕೂಟಿ ಚಲಾಯಿಸುತ್ತಿದ್ದ ಮಾಲಿನಿಗೆ ಕೇಳಿಸಿರಲಿಲ್ಲ.

ಅವನಿಗೆ ಹಣ ಕೊಡುತ್ತಿದ್ದಂತೆ, ಅರಳಿದ ಮೊಗವರಳಿ 'ಇದೇ ನಂಬರ್‌ಗೆ ಫೋನ್ ಪೇ ಮಾಡಲಾ ಮೇಡಂ' ಎಂದು ಕೇಳಿದ. 'ಹೂಂ' ಎಂದು ತಲೆಯಾಡಿಸುತ್ತಿದ್ದಂತೆ ಥಟ್ಟನೆ ಹಣ ಹಾಕಿ, ಆತಂಕದಿಂದ ಒಳಗೆ ಓಡಿಹೋದವನನ್ನು ನೋಡುತ್ತ 'ಒಳ್ಳೆಯದಾಗಲಿ' ಎಂದು ಮನಸ್ಸಿನಲ್ಲೇ ಶುಭ ಹಾರೈಸಿ, ಸ್ಕೂಟಿಯನ್ನು ಮನೆಯ ಕಡೆಗೆ ತಿರುಗಿಸಿದಳು.

ಬೆಂಗಳೂರಿನಿಂದ ಮಗಳ ಫೋನು ಬಂದಿತ್ತು. 'ಮಮ್ಮೀ ಇವತ್ತು ಮೆಟ್ರೋದಲ್ಲಿ ಹೋಗುವಾಗ, ತಲೆ ತಿರುಗಿ ಬಿದ್ದುಬಿಟ್ಟೆ. ಯಾರೋ ಒಬ್ಬಾಕೆ, ನೀರು ಕುಡಿಸಿ, ಚಾಕೊಲೇಟ್ ತಿನ್ನಲು ಕೊಟ್ಟು. ಈಗ ಆರಾಮಿದೀನಿ' ಎಂದಾಗ, ಸ್ವಲ್ಪ ಹೊತ್ತು ಗರಬಡಿದಂತೆ ನಿಂತಳು.

'ನಾವು ಯಾರಿಗಾದರೂ ಏನೂ ಅಪೇಕ್ಷಿಸದೆ ಸಹಾಯ ಮಾಡಿದಾಗ, ನಮ್ಮ ಮಕ್ಕಳನ್ನೂ ದೇವರು ಇನ್ನೊಂದು ರೂಪದಲ್ಲಿ ಕಾಯುತ್ತಾನೆ' ಎನ್ನುವ ಅಮ್ಮನ ಮಾತು ನೆನಪಾಯ್ತು.

ವಾಟ್ಸಾಪಿನಲ್ಲಿ ಆ ಹುಡುಗ 'ಮೇಡಂ, ಇವತ್ತು ನಿಮ್ಮಿಂದ ತುಂಬ ಸಹಾಯವಾಯಿತು. ದೇವರ ರೂಪದಲ್ಲಿ ಬಂದು ಸಹಾಯ ಮಾಡಿದಿರಿ. ನಿಮ್ಮನ್ನು ಸರಿಯಾಗಿ ಮಾತನಾಡಿಸಲೂ ಆಗಲಿಲ್ಲ, ಥ್ಯಾಂಕ್ಸ್ ಕೂಡ ಹೇಳುವುದನ್ನು ಮರೆತೆ, ತುಂಬ ಥ್ಯಾಂಕ್ಸ್' ಎಂದು ಮೆಸೇಜಿಸಿದವನಿಗೆ – 'ಇರಲಿ ಬಿಡಪ್ಪ, ಒಳ್ಳೆಯದಾಗಲಿ' ಎಂದು ರಿಪ್ಲೈ ಕೊಟ್ಟಾಗ ಮೊಗದಲ್ಲೊಂದು ಸಂತೃಪ್ತ ಭಾವ.

ಪ್ರತಿಕ್ರಿಯಿಸಿ: feedback@sudha.co.in

## ನಕ್ಕುಬಿಡಿ

**ರಂಗ:** ಡಾಕ್ಟರ್ ಹೇಳಿದಂತೆ ನಿನ್ನ ಆಹಾರ ಮತ್ತು ಜೀವನಶೈಲಿಯನ್ನು ಬದಲಾಯಿಸಿಕೊಂಡೆಯೇನೋ?
**ಗುಂಡ:** ಇಲ್ಲ ಕಣೊ, ಡಾಕ್ಟರನ್ನೇ ಬದಲಾಯಿಸಿಕೊಂಡೆ.

★★★

**ಹೆಂಡತಿ:** ನಿಮ್ಗೆ ಎಲ್ಲಿ ಮರ್ಯಾದೆ ಸಿಗೋದಿಲ್ವೋ ಅಲ್ಲಿ ಖಂಡಿತಾ ನೀವು ಹೋಗಲೇ ಬೇಡ್ರಿ.
**ಗಂಡ:** ಹಾಗಾದ್ರೆ ನಾನು ಮನೆಗೂ ಬರಬಾರದು ಅಂತ ತಾನೆ ನೀನು ಹೇಳ್ತಿರೋದು?

★★★

**ಬಾಸ್:** ಹುಡುಗೀರು factoryಲಿ ಉದ್ದ ಲಂಗ ಹಾಕ್ಕೊಂಡ್ರೆ
**ಗುಂಡ:** Mechine ನಿಂದ ದೂರ ಇರಬೇಕು ಸಾರ್
**ಬಾಸ್:** ತುಂಡು ಲಂಗ ಹಾಕ್ಕೊಂಡ್ರೆ
**ಗುಂಡ:** Engineer ನಿಂದ ದೂರ ಇರಬೇಕು ಸಾರ್!

★★★

**ಡಾಕ್ಟರ್:** ಅಕ್ಷರಮಾಲೆಯ ಎಲ್ಲಾ ಫಲಕಗಳನ್ನು ತೋರಿಸಿದರು ಯಾಕೋ ಓದುತ್ತಿಲ್ಲಾ?
**ಗುಂಡ:** ನಾನು ಅನಕ್ಷರಸ್ಥ ಸಾರ್..

★★★

**ಮೇಷ್ಟ್ರು:** ವಾಸ್ಕೋಡಿಗಾಮ ಭಾರತಕ್ಕೆ ಯಾವಾಗ ಬಂದರು?
ಗುಂಡ: ಚಳಿಗಾಲದಲ್ಲಿ ಸಾರ್
**ಮೇಷ್ಟ್ರು:** ನಿಂಗೆ ಹೇಗೆ ಗೊತ್ತು?
ಗುಂಡ: ಪುಸ್ತಕ ನೋಡ್ದೆ ಸ್ವೆಟರ್ ಹಾಕ್ಕೊಂಡಿದ್ರು ಸಾರ್..

★★★

**ಟೀಚರ್:** ಲೋ ಗುಂಡ ಈ ಸಲ ಒಳ್ಳೆಯ ಮಾರ್ಕ್ಸ್ ತಗೊಂಡಿದ್ಯಾ ಯಾವಾಗಲು ಹೀಗೆ ತಗೊಬೇಕು ಆಯ್ತಾ.
**ಗುಂಡ:** ಆಯ್ತು ಟೀಚರ್, ನೀವು ಯಾವಾಗಲೂ ನಿಮ್ಮ ಕ್ವೆಶ್ಚನ್ ಪೇಪರ್ ರಫು ಅಣ್ಣನ ಅಂಗಡೀಲೆ ಜೆರಾಕ್ಸ್ ಮಾಡ್ಸಿ ಆಯ್ತಾ.

★★★

**ಮೇಷ್ಟ್ರು:** ಕಾಡು ಬೆಳೆಸಿ ನಾಡು ಉಳಿಸಿ ಇದೇ ತರ ಇನ್ನೊಂದು ಉದಾಹರಣೆ ಕೊಡಿ
**ಗುಂಡ:** ಎಲ್ಲರ ತಲೆ ಬೋಳಿಸಿ ಕೊಬ್ಬರಿ ಎಣ್ಣೆ ಉಳಿಸಿ!

ಸಂಗ್ರಹ: ಬಿ.ಆರ್. ಉಷಾ, ಬೆಂಗಳೂರು